ಶ್ರೀ ವಾಟಾಳ್ ನಾಗರಾಜ್ : ಇನ್ನೂ ಕೊಟ್ಟಿಲ್ಲ. ಅವರು ತಮ್ಮ ತೀರ್ಪನ್ನು ಕೊಡುವ ಮುಂಚೆ ನಾವು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ತಾವು ಕಾನೂನನ್ನು, ನಿಯಮಗಳನ್ನು, ಸಂಪ್ರದಯಾಗಳನ್ನು ಪರಿಶೀಲಿಸಿ ಕನ್ಸಿಡರ್ಡ್ ರೂಲಿಂಗ್‌ನ್ನು ಕೊಡಬೇಕು. ಆಲ್ ರೈಟ್. ಈಗ ಆಯಿತು. ಆಗ ಆಗಿರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಅತ್ತೂ ಕರೆದು ಆರೋಗ್ಯ ಮಂತ್ರಿಗಳನ್ನು ಸದನಕ್ಕೆ ಕರೆಸಿಕೊಳ್ಳಬೇಕಾಯಿತು.

ಉಪಾಧ್ಯಕ್ಷಿಣಿಯವರು : ಈ ರೀತಿ ನಡೆಯುತ್ತಿರುವುದು ಇದು ಮೊದಲನೆಯ ಸಲವಲ್ಲ. ಹಿಂದಿನಿಂದಲೂ ಕೂಡ ನಡೆದುಕೊಂಡು ಬಂದಿದೆ. ಈಗ ಮಾನ್ಯ ಮಂತ್ರಿಗಳು ಬಂದಿರುತ್ತಾರೆ. ಒಂದು ಸ್ಟೇಜ್‌ಗೆ ಬಂದಿರುತ್ತೇವೆ. ಮಾನ್ಯ ಮಂತ್ರಿಗಳು ಈಗ ವಿಧೇಯಕಗಳನ್ನು ಮಂಡಿಸಬೇಕು.

ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

1992ರ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ 1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ"1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

1992ನೇ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ ನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ 1992ನೇ ಸಾಲಿನ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ

ನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಪ ಏನೆಂದರೆ" 1992ನೇ ಸಾಲಿನ ಕರ್ನಾಟ ಆಯುರ್ವೇದ ಮತ್ತು ಯುನಾನಿ ವೃತ್ತಿನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪ ಬಂಧಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, 1991-92ನೇ ಜಂಟಿ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರು ದಯಪಾಲಿಸಿರತಕ್ಕಂಥ ಭಾಷಣದ ವಂದನಾನಿರ್ಣಯಕ್ಕೆ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ನಿಂತಿದ್ದೇನೆ. ಮೊದಲನೆಯದಾಗಿ ಇದಕ್ಕೆ ಕಾರಣ ಈ ವಂದನಾ ನಿರ್ಣಯವನ್ನು ಸಭೆಯಲ್ಲಿ ಮಂಡನೆ ಮಾಡಿದವರಾಗಲಿ, ಸೂಚಿಸಿದವರಾಗಲಿ, ಅನುಮೋದನೆ ಮಾಡಿದವರಾಗಲಿ ಯಾರೂ ಇಲ್ಲ, ಇಂಥ ಒಂದು ದುರಂಥ ಈ ರೀತಿ ಸಾಂಪ್ರದಾಯಿಕವಾಗಿ ರಾಜ್ಯಪಾಲರ ಭಾಷಣದ ವಂದನಾನಿರ್ಣಯಕ್ಕೆ ನಾವು ಮಾಡುತ್ತಿರತಕ್ಕಂಥ ಪ್ರವೃತ್ತಿ ಸಲ್ಲದೆಂದು ತಮ್ಮಲ್ಲಿ ಹೇಳಲು ಇಚ್ಚೆ ಪಡುತ್ತೇನೆ.

ಮಾನ್ಯ ರಾಜ್ಯಪಾಲರ ಜಂಟಿ ಅಧಿವೇಶನವನ್ನು ಕರೆದು ಮಾಡುವಂಥ ಭಾಷಣ : ಆಳುವ ಸರ್ಕಾರದ ನೀತಿ ನಿರೂಪಣೆಯನ್ನು ಮತ್ತು ಆ ವರ್ಷದ ಕಾರ್ಯಕ್ರಮಗಳನ್ನು ದಾಖಲು ಮಾಡತಕ್ಕಂಥ ಒಂದು ದಾಖಲೆಯ ಪತ್ರವಾಗಬೇಕು. ಅಷ್ಟೆ ಗಂಭೀರವಾಗಿ ಆಳತಕ್ಕಂಥ ಪಕ್ಷ ಮತ್ತು ಆಳುವ ಮಾನ್ಯ ಸದಸ್ಯರು ಅದನ್ನು ಗಂಭೀರವಾಗಿ ಗಮನಿಸಬೇಕು. ಆದರೆ ಸಭೆಯ ಹಾಜರಾತಿಯನ್ನು ನೋಡಿದರೆ ಅದರ ಗಂಭೀರತೆ ಮಹತ್ವ ಎಷ್ಟೆಂಬುದು ನಮಗೆ ಅರಿವಾಗುತ್ತದೆ.

ಇಂಥ ಸಾಂಪ್ರದಾಯಿಕ ಭಾಷಣಗಳನ್ನು ಮುಂದೆ ರಾಜ್ಯಪಾಲರಿಂದ ಮಾಡಿಸಬೇಕೆ ಇದು ಅನಿವಾರ್ಯವೇ, ಅಗತ್ಯವೇ ಎಂಬ ಮೂಲ ಪ್ರಶ್ನೆ ಕೂಡ ಉದ್ಭವವಾಗುತ್ತದೆ. ನಾನು ಅದಕ್ಕಾಗಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಾ ಒಂದು ಮಾತನ್ನು ಹೇಳಿದ್ದೆ. ಇದು ನೀತಿ ನಿರೂಪಣೆ ನಿರೂಪಿಸತಕ್ಕ